ಈ ದಿನ ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಟಿ ವಕೀಲರಿಂದಃ**

ಈ ದಾವೆಯನ್ನು ಯಾರು ಯಾರ ವಿರುದ್ದ ಎಷ್ಟು ವಿಸ್ತೀರ್ಣದ ಆಸ್ತಿಗಾಗಿ ಹೂಡಿರುತ್ತಾರೆ ಎಂದರೆ ಸಾಕ್ಷಿ ವಾದಿ ಮಾನಾಚಾರಿಯವರ ಮಗನ ವಿರುದ್ದ ಹೂಡಿರುತ್ತಾರೆ. ಅತನ ಹೆಸರು ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ದಾವಾಸ್ತಿ ನಮ್ಮದೆಂದು ಮಾನಚಾರಿಯವರು ಆತನಿಗೆ ವಿಲ್ ನ್ನು ಮಾಡಿಕೊಟ್ಟಿರುತ್ತಾರೆಂದು ಹೂಡಿರುತ್ತಾರೆ. ವಾದಿ ನಮ್ಮ ಗ್ರಾಮಸ್ಥರು ಮತ್ತು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ನಮೂದಿಸಿದ ಸಂಗತಿಗಳಿಗೆ ಮಾಹಿತಿಯನ್ನು ವಾದಿ ಕೊಟ್ಟಿರುತ್ತಾರೆ. ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸದರಿ ಪ್ರಶ್ನೆಯನ್ನು ಸಾಕ್ಷಿಗೆ 3-4 ಬಾರಿ ಕೇಳಿದಾಗಲೂ ಸಹ ಸಾಕ್ಷಿ ಸದರಿ ಪ್ರ.ಪತ್ರವನ್ನು ವಿಲ್ ಕುರಿತು ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

2. ದಾವಾಸ್ತಿಯ ಚೆಕ್ಕುಬಂದಿಯಲ್ಲಿ ನನಗೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವಲ್ಪ ದೂರದಲ್ಲಿದೆ ಎಂದು ನುಡಿಯುತ್ತಾರೆ. ನಾನು ವಿಲ್ ಪತ್ರದ ಸಾಕ್ಷಿದಾರನಲ್ಲ ಎಂದರೆ ಸರಿ. ಸದರಿ ವಿಲ್ ನ್ನು ಮಾನಾಚಾರಿ ಎನ್ನುವವರು ವಾದಿಗೆ ಬರೆದಿರುತ್ತಾರೆ. ಸದರಿ ವಿಲ್ ಪತ್ರವನ್ನು ವಾದಿಯವರು ಬರೆಸಿರುತ್ತಾರೆ. ದಿನಾಂಕ ನನಗೆ ಹೇಳಲಾಗುವುದಿಲ್ಲ. ಸದರಿ ವಿಲ್ ನ ನೊಂದಣಿ ಕುರಿತು ನನಗೆ ಗೊತ್ತಿಲ್ಲ. ಸದರಿವಿಲ್ ನ್ನು ಬರೆದಕೊಡುವ ಸಮಯಕ್ಕೆ ನಾನು ಖುದ್ದು ಹಾಜರಿರಲಿಲ್ಲ ಮತ್ತು ಅದನ್ನು ನೋಡಿಲ್ಲ ಎಂದರೆ ಸರಿ. ಮಾನಾಚಾರಿ ಮತ್ತು ವಾದಿಯವರು ಬೇರೆ ಬೇರೆ ಜನಾಂಗದವರು ಎಂದರೆ ಸರಿ. ಪ್ರತಿವಾದಿಯ ತಂದೆಗೆ ದಾವಾಸ್ತಿ ಮಂಜೂರದ ಕಾಲದಿಂದಲೂ ಸಹ ಆತನೇ ಆತನ ಕುಟುಂಬದೊಂದಿಗೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

3. ಸಾಮಾನ್ಯವಾಗಿ ಸರ್ಕಾರದಿಂದ ಆಸ್ತಿಯನ್ನು ಮಂಜೂರು ಮಾಡುವ ಸಮಯಕ್ಕೆ ಸದರಿ ಆಸ್ತಿಯನ್ನು ಸಾಗುವಳಿದಾರರಿಗೆ ಮಂಜೂರು ಮಾಡುತ್ತಾರೆ ಎಂದರೆ ಸರಿಯಲ್ಲ. ಮಾನಾಚಾರಿಯವರನ್ನು ಮತ್ತು ಅತನ ಹೆಂಡತಿಯಾದ ಶಾರದಮ್ಮನವರನ್ನು ನೋಡಿರುತ್ತೇನೆ. ಸದರಿಯವರು ಮೂಲತಃ ತರೀಕೆರೆ ವಾಸಿಗಳು ಎಂದರೆ ಸರಿ. ವಾದಿ ಗುರುಪುರದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ, ವಾದಿ ಈ ದಿನಕ್ಕೂ ಸಹ ಗುರುಪುರದಲ್ಲಿ ವಾಸವಾಗಿದ್ದು, ಗಂಡುಗನಹಂಕಲು ಗ್ರಾಮದಲ್ಲಿ ಯಾವಾಗಲೂ ಸಹ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಮನೆಯ ಅಕ್ಕಪಕ್ಕದಲ್ಲಿ ವಾಸವಿಲ್ಲ ಎಂದರೆ ಸರಿ. ಪ್ರತಿವಾದಿಯ ತಂದೆ ತಾಯಿಗಳು ಅವರ ಕೊನೆ ಕಾಲದಲ್ಲಿ ತರೀಕೆರೆಯಲ್ಲಿ ವಾಸವಿದ್ದರು. ಹಾಗಾಗಿ ಪ್ರತಿವಾದಿಯ ತಂದೆ ಮಾನಾಚಾರಿಯವರು ವಾದಿಗೆ ಯಾವುದೇ ವಿಲ್ ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ನ್ನು ಬರೆದಕೊಡುವ ಸಮಯಕ್ಕೆ ನಾನು ಹಾಜರಿಲ್ಲದ ಕಾರಣ ಸದರಿ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

4. ವಾದಿ ನಮ್ಮ ಗ್ರಾಮದವರಾದ ಕಾರಣ ಈ ದಾವೆಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರ.ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾಸ್ತಿಗೆ ಪ್ರತಿವಾದಿಗಳೇ ಹಕ್ಕುದಾರರ ಮತ್ತು ಮಾಲೀಕರು ಎಂದರೆ ಸರಿಯಲ್ಲ. ಮಾನಾಚಾರಿಯವರ ವಾರಸುದಾರರೇ ಪ್ರತಿವಾದಿ ಎಂದರೆ ಸರಿ. ಹಾಗಾಗಿ ದಾವಾಸ್ತಿ ಪ್ರತಿವಾದಿಗಳ ಮಾಲೀಕತ್ವದ ಆಸ್ತಿ ಎಂದರೆ ಸರಿಯಲ್ಲ. ಮಾನಾಚಾರಿಯವರು ಯಾವಾಗ ಮೃತಪಟ್ಟರು ಎಂದು ನನಗೆಗೊತ್ತಿಲ್ಲ. ನಿಪಿ-1 ರಂತೆ ವಿಲ್ ಆಗುವ ಪೂರ್ವವೇ ಮಾನಚಾರಿಯವರು ಮರಣಹೊಂದಿದ್ದರು ಎಂದರೆ ಸರಿಯಲ್ಲ. ನಿಪಿ-1 ನ್ನು ಹೊರತುಪಡಿಸಿ ನಾನು ಸದರಿ ಮಾನಚಾರಿ ಮತ್ತು ಶಾರದಮ್ಮರವರು ಇವರೇ ಎಂದು ಗುರುತಿಸಲು ಯಾವುದೇ ದಾಖಲೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಿಪಿ-1 ನ್ನು ಮಾನಾಚಾರಿಯವರಾಗಲಿ ಅಥವಾ ಅವರ ಹೆಂಡತಿಯಾದ ಶಾರದಮ್ಮನವರಾಗಲಿ ವಾದಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

OS  306/2023
PW- 2

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.